ಬಂದೂಕನ್ನು ಮಾತಿನಿಂದಲೇ ಮೊಂಡು ಮಾಡುವ, ಅಮರ ಸೋಲುವ ಸನ್ನಿವೇಶವಿದು.

ಗಾಯಗೊಂಡ ಅಮರನಿಗೆ ಚಿಕಿತ್ಸೆ ನೀಡಿ ಮನೆಗೆ ಕರೆದುಕೊಂಡು ಹೋಗುವ ಪ್ರೊಫೆಸರ್, ಒಂದು ಕಾಲದಲ್ಲಿ ತಮ್ಮ ಪತ್ನಿ ಮಲಗಿದ್ದ ಹಾಸಿಗೆಯನ್ನು ನೀಡುತ್ತಾರೆ. ಆ ಹಾಸಿಗೆಯಲ್ಲಿ ಮಲಗಿದ ಅಮರನ ಮನಸ್ಸಿನಲ್ಲಿ ತುಂಬಿದ್ದ ರಾಜಕೀಯ, ದ್ವೇಷ ಮತ್ತು ಹಿಂಸೆಯನ್ನು ವಚನಗಳ ಮೂಲಕ ಪ್ರೊಫೆಸರ್ ಕಿತ್ತೊಗೆಯುತ್ತಾರೆ. ಕೈ ಕಾಲು ಅಲುಗಾಡಿಸಲು ಸಾಧ್ಯವಾಗದೆ ಬಿದ್ದುಕೊಂಡಿದ್ದ ಅಮರನಿಗೆ ಪ್ರೊಫೆಸರ್ ವಾಲ್ಮೀಕಿ ರಾಮಾಯಣ ಓದಲು ಕೊಡುತ್ತಾರೆ. ಕ್ರಮೇಣ ಅಮರ 'ಅಮರ'ನಾಗುತ್ತಾನೆ. ಬೇಡನಾಗಿದ್ದವನು ವಾಲ್ಮೀಕಿಯಾದಂತೆ ಅಮರನೂ ವಿವೇಕವನ್ನು ಪಡೆಯುತ್ತಾನೆ. ಇದು ಜ್ಞಾನದ ಗೆಲುವು. ಈ ಮೂಲಕ ಹಂತಕನಾಗಿ ತನ್ನಲ್ಲಿಗೆ ಬಂದ ಅಮರನನ್ನು ಪ್ರೊಫೆಸರ್ 'ಭಗವಾನ್' ಆಗಿ ಮಾರ್ಪಾಡು ಮಾಡುತ್ತಾರೆ.

ಅಮರನಿಗೆ ಪ್ರೊಫೆಸರ್ ಅವರನ್ನು ಕೊಲ್ಲಲು ಸಾಧ್ಯವಾಗಲಿಲ್ಲ. ಆದರೆ ಮಲ್ಲಪ್ಪ ಪ್ರೊಫೆಸರ್ ಹಣೆಗೆ ಗುಂಡಿಕ್ಕುತ್ತಾನೆ. ಕುಸಿದು ಬೀಳುತ್ತಿದ್ದ ಪ್ರೊಫೆಸರ್‌ನ್ನು ಹಿಡಿದು ಅಳಬೇಕೆಂದು ಅಮರ ಬಯಸಿದರೂ ಅದು ಸಾಧ್ಯವಾಗುವುದಿಲ್ಲ. ಎದೆಗಪ್ಪಿ ಹಿಡಿದಾಗ ಅವರ ದೇಹ ಇನ್ನೂ ಬಿಸಿಯಾಗಿತ್ತು. ಇಚ್ಛಾಮರಣ ದಕ್ಕಿದ ಖುಷಿ ಅವರಲ್ಲಿತ್ತು. ತುಟಿಗಳು ಏನನ್ನೋ ಹೇಳಲು ಕಾತರಿಸುವಂತಿದ್ದವು. ಹಾಲಿನಂತೆ ಬೆಳ್ಳಗಿನ ಹುಬ್ಬುಗಳ ನಡುವೆ ಹಣೆ ಮೇಲೆ ಕೆಂಪು ನಕ್ಷತ್ರವೊಂದು ಉದಿಸಿತ್ತು. ನಕ್ಷತ್ರದ ಬಾಲದಂತೆ ಕೆಂಪು ರಕ್ತ ಮೂಗಿನ ತುದಿಯತ್ತ ಹರಿಯಿತು ಎಂದು ಕತೆಗಾರ್ತಿ ಬಣ್ಣಿಸುತ್ತಾರೆ.

ಸಂಕಲನದ ಉಳಿದ ಕಥೆಗಳು ನಮ್ಮ ಸುತ್ತಮುತ್ತಲು ನಡೆಯುತ್ತಿರುವ ವಿದ್ಯಮಾನಗಳನ್ನು ಬಿಂಬಿಸುವಂತಿವೆ. 'ಆಣ್ ಪ್ರೇತಂ' (ಗಂಡು ಪ್ರೇತ) ಎಂಬ ಕತೆಯು ಮಹಿಳೆಯನ್ನು ದಮನಗೊಳಿಸಲು ಬಯಸುವ ಪುರುಷ ಸಮಾಜಕ್ಕೆಸೆದಿರುವ ಸವಾಲಾಗಿದೆ. ನಿನಗಿಂತ ನಾನು ಬಲಿಷ್ಠ ಎಂಬುದನ್ನು ಒಪ್ಪಿಕೋ ಎಂಬ ಪುರುಷ ಪ್ರಧಾನ ಸಮಾಜದ ಘೋಷಣೆ ಪ್ರೇತವಾದ ನಂತರವೂ ಬದಲಾಗುವುದಿಲ್ಲ. ಯಾಕೆಂದರೆ ಪ್ರೇತವಾಗಿದ್ದರೂ ಗಂಡು ಗಂಡೇ ಆಗಿರುತ್ತಾನೆ.

'ಸೆಪ್ಟೆಂಬರ್ ಮುಪ್ಪದ್' ಎಂಬ ಕತೆ ಪ್ರೇಮದ ಹೆಸರಲ್ಲಿ ನಡೆದ ವಂಚನೆಯ ಕತೆ ಹೇಳುತ್ತದೆ. ಆದರೆ ಈ ವಂಚನೆಗೆ ಧೃತಿಗೆಡದೆ ತನ್ನನ್ನು ವಂಚಿಸಿದವನಿಗೆ ಕಾನೂನು ಪ್ರಕಾರ ಶಿಕ್ಷೆ ನೀಡುವ ಮೂಲಕ ಪ್ರೀತಿಯ ಉಡುಗೊರೆ ನೀಡುತ್ತಾಳೆ ಕಥಾನಾಯಕಿ. 'ಸ್ವಚ್ಛ ಭಾರತಿ' ಮತ್ತು 'ಸಂಘಿಯಣ್ಣನ್' ಕತೆಗಳು ರಾಜಕೀಯ ವಿದ್ಯಮಾನಗಳನ್ನು ನೆನಪಿಸುತ್ತವೆ. ಸ್ವಚ್ಛಭಾರತ, ಆಹಾರ ಸಂಸ್ಕೃತಿ, ಅರಾಜಕತೆಗಳು ಈ ಕತೆಗಳಲ್ಲಿ ಚರ್ಚೆಗೊಳಗಾಗುತ್ತವೆ. 'ಮಾಧ್ಯಮಧರ್ಮನ್' ಕತೆ ಸುದ್ದಿಗಾಗಿ ಸುದ್ದಿ ಸೃಷ್ಟಿಸುವ ಮಾಧ್ಯಮ (ಅ)ಧರ್ಮದ ಬಗ್ಗೆ ದನಿಯೆತ್ತುತ್ತದೆ.

ಮೀರಾ ಅವರ ಕತೆಗಳನ್ನು ಓದಿದ ನಂತರ ಮತ್ತೆ ಮತ್ತೆ ಕಾಡುವುದು, 'ಭಗವಾನ್ಡೆ ಮರಣಂ'. ಕತೆಗಾರ್ತಿ ಕಾಲ್ಪನಿಕ ಎಂದರೂ, ಆ ಕತೆ ನಮ್ಮ ಸಂಶೋಧಕ ಎಂ.ಎಂ. ಕಲಬುರ್ಗಿ ಅವರ ದುರಂತ ಅಂತ್ಯವನ್ನು ನೆನಪಿಸುತ್ತದೆ. ವೈಚಾರಿಕ ಭಿನ್ನಾಭಿಪ್ರಾಯದಲ್ಲಿ ವಿವೇಕಕ್ಕೆ ಮಸಿ ಹತ್ತಿದಾಗ ನಡೆಯುವ ದುರಂತ ಕಲ್ಪನೆಯ ಹಂತ ದಾಟಿ, ವಸ್ತುಸ್ಥಿತಿಯೇ ಆಗಿರುವ ಸಂದರ್ಭ ಇಂದಿನದು. ಇನ್ನುಮುಂದೆ ಕತೆಗಳು ಕಾಲ್ಪನಿಕ ಜಗತ್ತಿನಲ್ಲಿ ಸಂಭವಿಸುವುದಿಲ್ಲ ಎನ್ನುವುದಕ್ಕೂ 'ಭಗವಾನ್ಡೆ ಮರಣಂ' ಉದಾಹರಣೆಯಂತಿದೆ.

ಎಂ.ಎಂ. ಕಲಬುರ್ಗಿ ಅವರ ಸಾವಿಗೆ ಮಲಯಾಳಂ ಕಥಾಜಗತ್ತಿನ ಅರ್ಥಪೂರ್ಣ ಪ್ರತಿಭಟನೆಯಂತೆ, ಶ್ರದ್ಧಾಂಜಲಿಯಂತೆ 'ಭಗವಾನ್ಡೆ ಮರಣಂ' ಸಂಕಲನ ಹಾಗೂ ಆ ಕೃತಿಯ ಮುಖಪುಟ ವಿಶಿಷ್ಟವಾಗಿ ರೂಪುಗೊಂಡಿದೆ.